ದಿನಾಂಕ 27.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಶ್ರೀ.ಕೆ.ಪಿ.ಬಿ. ವಕೀಲರಿಂದಃ-**

ನಾನು ಸಿವಿಲ್ ಇಂಜಿನಿಯರ್ ಪದವೀದರನಾಗಿದ್ದು, ಕೆಲಸಕ್ಕೆ ಹೋಗುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ವಿಚಾರಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ನಾನು ವಾದಿ 1(ಬಿ) ರವರನ್ನು 1998 ರಲ್ಲಿ ಪರಸ್ಪರ ಪ್ರೀತಿಸಿ ವಿವಾಹವಾಗಿರುತ್ತೇನೆ. ಅವರ ಮನೆತನದವರು, ನನ್ನ ತಾಯಿಯ ಕಡೆಯ ದೂರದ ಸಂಬಂಧಿಕರು. 1980 ರಿಂದ ನಾನು ವಾದಿಯ ಕುಟುಂಬದೊಂದಿಗೆ ಸಂಪರ್ಕ ಹೊಂದಿದ್ದೆನು.

ವಾದಿಯು ಸೈನ್ಯಕ್ಕೆ ಯಾವ ವರ್ಷ ಸೇರಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. 1989 ರಲ್ಲಿ ಅವರು ನಿವೃತ್ತಿ ಹೊಂದಿರುತ್ತಾರೆ. ನಿವೃತ್ತಿ ಹೊಂದಿದ ಬಳಿಕ ಅವರು ಹಳ್ಳಿಗಟ್ಟು ಗ್ರಾಮದಲ್ಲಿ ನೆಲೆಸಿದ್ದರು. ಸದರಿ ಗ್ರಾಮದಲ್ಲಿ ಅವರು ತಾವು ನಿವೃತ್ತಿ ಹೊಂದುವುದಕ್ಕಿಂತ ಐದು ವರ್ಷದ ಮೊದಲು ಒಂದು ಮನೆಯನ್ನು ಅವರು ನಾರಾಯಣ ಎಂಬುವವರಿಂದ ಖರೀದಿಸಿದ್ದರು. ಆದರೆ, ದಿನಾಂಕ ನನಗೆ ನಿಖರವಾಗಿ ಗೊತ್ತಿಲ್ಲ. ವಾದಿ 1(ಬಿ) ರವರನ್ನು ವಿವಾಹವಾಗುವುದಕ್ಕಿಂತ ಮೊದಲು ವಾದಿಯ ಕುಟುಂಬದ ಬಗ್ಗೆ ನನಗೆ ಯಾವುದೇ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ.

ವಾದಿಗೆ ಮಂಜೂರಾದ ಜಾಗವನ್ನು ಪ್ರತಿವಾದಿಗಳು ಅತಿಕ್ರಮಿಸಿಕೊಂಡಿರುವ ವಿಚಾರಕ್ಕೆ ಸಂಬಂಧಿಸಿದಂತೆ ಈ

ದಾವೆಯನ್ನು ಹೂಡಲಾಗಿದೆ. ಜಿಲ್ಲಾಧಿಕಾರಿಯವರ ನಿರ್ದೇಶನದ ಮೇರೆಗೆ ತಹಶೀಲ್ದಾರ್ ರವರು ವಾದಿಗೆ ದಾವಾ ಸ್ವತ್ತನ್ನು ಮಂಜೂರು ಮಾಡಿರುತ್ತಾರೆ. ದಾವಾ ಸ್ವತ್ತಿನ ಸರ್ವೆ ನಂ. 130/15, ವಿಸ್ತೀರ್ಣ 4 ಎಕರೆ ಇದ್ದು, ಅದರ ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ವಾದಿಗೆ ಮಂಜೂರಾದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಸ್ವತ್ತು ವಾದಿಗೆ ಮಂಜೂರಾಗಿಲ್ಲದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ಮಾವನಿಗೆ ಮಂಜೂರಾಗಿಲ್ಲದೇ ಇರುವುದರಿಂದ ನಾನು ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಿಶಾನೆ ಪಿ. 1 ರಲ್ಲಿ ವಾದಿಯ ಹೆಸರು ನಮೂದು ಇರುವುದಿಲ್ಲ ಎಂದರೆ ಸರಿ. ನಿಶಾನೆ ಪಿ. 3 ರಲ್ಲಿ ಸರ್ವೆ ನಂ. 130/15 ರ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ನಿಶಾನೆ ಪಿ. 4 ರಲ್ಲಿ ದಾವಾ ಸ್ವತ್ತು ವಾದಿಗೆ ಮಂಜೂರಾಗಿರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ಪ್ರತಿವಾದಿಗಳು ನನಗೆ ಪರಿಚಯವಿದ್ದು, ಅವರಿಬ್ಬರೂ ಸಹೋದರರು. ಅವರು ನನಗೆ 2014 ರಿಂದ ಪರಿಚಯವಿರುತ್ತಾರೆ. ದಾವಾ ಸ್ವತ್ತಿನ ಅಕ್ಕ-ಪಕ್ಕ ಪ್ರತಿವಾದಿಗಳಿಗೆ ಸೇರಿದ ಜಮೀನುಗಳು ಇವೆ. ಸರ್ವೆ ನಂ. 129/2, 130/2 ಮತ್ತು 130/3 1ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದು, ಸದರಿ ಸ್ವತ್ತುಗಳು ದಾವಾ ಸ್ವತ್ತಿಗೆ ಹೊಂದಿಕೊಂಡಂತೆ ಇವೆ. ಸದರಿ ಸ್ವತ್ತುಗಳ ಪಹಣಿಗಳನ್ನು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಶಾನೆ ಡಿ. 1 ರಿಂದ 3 ಎಂದು ಗುರುತಿಸಲಾಯಿತು.

ವಾದಿಯು ಮೂಲತಃ ಶ್ರೀಮಂಗಲದ ಸಮೀಪವಿರುವ ಮಂಚಳ್ಳಿ ಗ್ರಾಮದವರು. ಸದರಿ ಗ್ರಾಮದಲ್ಲಿ ವಾದಿಗೆ ಪಿತ್ರಾರ್ಜಿತ ಆಸ್ತಿಗಳು ಇರುವುದಿಲ್ಲ. ಮಂಚಳ್ಳಿ ಗ್ರಾಮದಲ್ಲಿರುವ ಸ್ವತ್ತುಗಳಲ್ಲಿ ವಾದಿಯ ಸಹೋದರರರು ಸ್ವಾಧೀನದಲ್ಲಿದ್ದು, ವಾದಿಯು ಯಾವುದೇ ಸ್ವತ್ತಿನ ಸ್ವಾಧೀನದಲ್ಲಿರುವುದಿಲ್ಲ. ವಾದಿಯ ಸಹೋದರರರು ಅವರ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದು, ವಾದಿಗೆ ಯಾವುದೇ ಹಿಸ್ಸೆ ನೀಡಿರುವುದಿಲ್ಲ.

ವಾದಿಯು ಸೈನ್ಯಕ್ಕೆ ಸೇರಿದ ಬಳಿಕ ಅವರ ಪತ್ನಿ ಮತ್ತು ಮಕ್ಕಳು ಮಂಚಳ್ಳಿಯಲ್ಲಿದ್ದ ಪಿತ್ರಾರ್ಜಿತ ಮನೆಯಲ್ಲಿ ವಾಸವಾಗಿದ್ದರು. ಹಳ್ಳಿಗಟ್ಟು ಗ್ರಾಮದಲ್ಲಿ ಮನೆಯನ್ನು ಖರೀದಿಸುವವರೆಗೂ ವಾದಿ ಮತ್ತು ಅವರ ಕುಟುಂಬಸ್ಥರು ಮಂಚಳ್ಳಿ ಗ್ರಾಮದಲ್ಲಿ ನೆಲೆಸಿದ್ದರು. ವಾದಿಯು ನಿವೃತ್ತಿ ಹೊಂದುವವರೆಗೂ ವರ್ಷದಲ್ಲಿ 2 ಬಾರಿ ಅಂದರೆ, 15 ದಿವಸ ಒಂದು ಸಾರಿ, ಮತ್ತು 30 ದಿವಸ ರಜಾದ ಮೇಲೆ ಬಂದು ಹೋಗುತ್ತಿದ್ದರು.

ವಾದಿಯ ಪತ್ನಿ ಗೃಹಿಣಿಯಾಗಿದ್ದರು. ವಾದಿ ಸೇವೆಯಿಂದ ನಿವೃತ್ತಿ ಹೊಂದಿ ಬರುವಷ್ಟರಲ್ಲಿ ವಾದಿ 1(ಬಿ) ಯಿಂದ (ಡಿ) ರವರು ವಿದ್ಯಾಭ್ಯಾಸ ಮಾಡಿ, ಬೇರೆ ಕುಟುಂಬಕ್ಕೆ ವಿವಾಹ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ವಾದಿ ಮತ್ತು ಅವರ ವಾರಸುದಾರರು ಯಾವತ್ತೂ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಿಃ 15.12.1989 ರಂದು ವಾದಿಯು ದಾವಾ ಸ್ವತ್ತಿನ ಸ್ವಾಧೀನವನ್ನು ಪಡೆದುಕೊಂಡಿರುತ್ತಾರೆ. ಆ ಬಗ್ಗೆ

ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಶಾನೆ ಪಿ. 1 ರಿಂದ 4 ರಲ್ಲಿ ಆ ಬಗ್ಗೆ ನಮೂದು ಇದೆ. ನಿಶಾನೆ ಪಿ. 1 ರಿಂದ 4 ದಾಖಲೆಗಳಲ್ಲಿ ವಾದಿಯು ದಾವಾ ಸ್ವತ್ತಿನ ಸ್ವಾಧೀನವನ್ನು ದಿಃ 15.12.1989 ರಂದು ಪಡೆದುಕೊಂಡ ಬಗ್ಗೆ ನಮೂದು ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದ ಸಾಗುವಳಿ ಚೀಟಿಯ ವಿತರಣೆಗೆ ಸಂಬಂಧಿಸಿದ ನಡವಳಿಗಳು ತಾಲೂಕು ಕಛೇರಿಯಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇದೆ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.